**ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ನ್ಯಾಯಾಲಯ, ಗುಂಡ್ಲುಪೇಟೆ**

**ಸಿ.ಸಿ ಸಂಖ್ಯೆ: 36/2025**

| | | | |
|---|---|---|---|
| ಹೆಸರು | | ಶ್ರೀ ಭರತ್ | ಚಾಸಾಃ 05 |
| ತಂದೆ ಹೆಸರು | | ಶ್ರೀ ಶಂಕರಪ್ಪ | ಪ್ರಾಸಾಃ 05 |
| ವಯಸ್ಸು | | 28 ವರ್ಷ | ಸಾಕ್ಷಿಯನ್ನು ದಿನಾಂಕಃ 06.04.2026 ರಂದು ಪ್ರಮಾಣೀಕರಿಸಲಾಯಿತು. |
| ಉದ್ಯೋಗ | | ವ್ಯವಸಾಯ | |
| ವಾಸ | | ಸೋಮಹಳ್ಳಿ ಗ್ರಾಮ | |

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ–**

ಸಾಕ್ಷಿಯು ನಿಪಿ2 ರಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ2(ಸಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ದಿಃ 03.10.2024 ರಂದು ಅಗತಗೌಡನಹಳ್ಳಿ ಗೇಟ್ ಹತ್ತಿರ ಮಾಡಿರುತ್ತೇನೆ. ಘಟನಾ ಸ್ಥಳವನ್ನು ಚಾಸಾ–2 ರವರು ತೋರಿಸಿದರು. ಸದರಿ ಮಹಜರ್ ನ್ನು ಮದ್ಯಾಹ್ನ 2.00 ರಿಂದ 2.45 ರವರೆಗೆ ಮಾಡಿದರು. ಆ ಕಾಲಕ್ಕೆ ನಾನು, ಚಾಸಾ–2 ಮತ್ತು 4 ರವರು ಹಾಜರಿದ್ದದರು. ಆ ಕಾಲಕ್ಕೆ ನಿಪಿ4 ಮತ್ತು 5 ರಂತೆ ಫೋಟೋ ತೆಗೆದರು.

**ಪಾಟೀ ಸವಾಲು: ಆರೋಪಿ ಪರ ವಕೀಲರಿಂದ**

ನಿಪಿ2 ರ ಕಾಲಕ್ಕೆ ಸುಮಾರು 4 ರಿಂದ 5 ಜನ ಹಾಜರಿದ್ದರು. ಚಾಸಾ–2 ರವರು ನನ್ನನ್ನು ಕರೆದುಕೊಂಡು ಹೋದರು. ನಿಪಿ2 ನ್ನು ಯಾರು ಬರೆದರು ಎಂದರೆ ನನಗೆ ಗೊತ್ತಿಲ್ಲ. ನಿಪಿ2 ರಲ್ಲಿ ಬರೆದಿರುವ ವಿಷಯ ನನಗೆ ಗೊತ್ತಿಲ್ಲ ಎಂದರೆ ಸರಿ. ಪೊಲೀಸರು ನನಗೆ ನೋಟೀಸ್ ನೀಡಿಲ್ಲ. ನಿಪಿ2 ಕ್ಕೆ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಘಟನಾ ಸ್ಥಳದ ಚೆಕ್ಕುಬಂದಿ ಪೂರ್ವಕ್ಕೆ–ಪರಶಿವಮೂರ್ತಿ ರವರ ಜಮೀನು, ಪಶ್ಚಿಮಕ್ಕೆ–ಮಹದೇವಪ್ಪರವರ ಜಮೀನು, ಉತ್ತರಕ್ಕೆ–ಊಟಿ–

ಮೈಸೂರು ರಸ್ತೆ ಮತ್ತು ದಕ್ಷಿಣಕ್ಕೆ-ಗುಂಡ್ಲುಪೇಟೆ ರಸ್ತೆ. ಮೃತರು ನಮ್ಮ ಗ್ರಾಮಸ್ಥರಾದ ಕಾರಣ ಪರಿಹಾರ ಬರಲಿ ಎಂದು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಕ್ತ ಲೇಖನ ಕೊಟ್ಟು ಓದಿ ನೋಡಿ ಸರಿಪಡಿಸಿ ನಂತರ ಸಹಿ ಮಾಡಲಾಯಿತು)

**ಓ ಹೇ ಕೇ ಸ ಇ ಎ ಒ**

**(ಗಿರೀಶ ಆರ್.ಬಿ)**
**ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ**
**ಗುಂಡ್ಲುಪೇಟೆ**